ಓ.ಎಸ್.186/2023 ಡಿ.ಡಬ್ಲು-3
ಮೀನಾಕ್ಷಮ್ಮ ಗಂಡ ಗವಿಸಿದ್ದಪ್ಪ

ದಿ.20-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

***ಮುಖ್ಯ ವಿಚಾರಣೆ: ಪ್ರತಿವಾದಿ ನಂ:1 ಪರ ವಕೀಲರಾದ ಶ್ರೀ ಆರ್.ಎಮ್.ವಾಯ್. ರವರಿಂದ :-***

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಯಲಾಗಿರುವ ಎಲ್ಲಾ ಅಂಶಗಳು ನನಗೆ ತಿಳಿದಿದ್ದು ಸತ್ಯಾಂಶಗಳಿಂದ ಕೂಡಿರುತ್ತವೆ. ನಾನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ.

***ಪಾಟೀ ಸವಾಲು : ವಾದಿ ಪರ ವಕೀಲರಾದ ಶ್ರೀ ವಿ.ಪಿ.ಎಸ್.ಜೆ ರವರಿಂದ***

ಬಸಲಿಂಗಮ್ಮಳ ಖರ್ಚು ವೆಚ್ಚ ಈ ದಾವೆ ದಾಖಲಾದಾಗಿನಿಂದ 2ನೇ ಪ್ರತಿವಾದಿಯ ಗಂಡ ಅಮರೇಶಪ್ಪನೇ ನೋಡಿಕೊಳ್ಳುತ್ತಿದ್ದಾನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮೊದಲು 1ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದಳು ಎಂದು ನುಡಿಯುತ್ತಾರೆ. ವಾದಿ ಬಸಲಿಂಗಮ್ಮಳು ಸುಮಾರು ವರ್ಷಗಳಿಂದ ರಾಮಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ವಾಸವಿರುತ್ತಾಳೆ ಎಂದರೆ ಸಾಕ್ಷಿಯು ಆಕೆಯ ಮನೆ ಅಲ್ಲಿಯೇ ಇತ್ತು ಎಂದು ನುಡಿಯುತ್ತಾರೆ. ಜಮಿನು ಮತ್ತು ಸಣ್ಣ ಕಿರಾಣಾ ಸ್ಟೋರನಿಂದ ಬಂದ ಆದಾಯವನ್ನು 1ನೇ ಪ್ರತಿವಾದಿ ತೆಗೆದುಕೊಳ್ಳುತ್ತಾಳೆ ಎಂದರೆ ಸರಿ. 1ನೇ ಪ್ರತಿವಾದಿ ಟೇಲರಿಂಗ ಕೆಲಸ ಮಾಡುತ್ತಾಳೆ ಎಂದರೆ ಸರಿಯಲ್ಲ. ಆದರೆ ಆಕೆಯ ಗಂಡ ಜೀವಂತ ಇದ್ದಾಗ ಮಾಡುತ್ತಿದ್ದಳು ಎಂದು ನುಡಿಯುತ್ತಾರೆ. ಸದರಿ 1ನೇ ಪ್ರತಿವಾದಿಗೆ ಒಟ್ಟು ರೂ.2-3 ಲಕ್ಷ ಆದಾಯ ಬರುತ್ತದೆ ಎಂದರೆ ಸರಿಯಲ್ಲ. ಅಂದಾಜು ವಾರ್ಷಿಕ 50-60 ಸಾವಿರ ಪ್ರತಿ ಜಮೀನಿನಿಂದ ಆದಾಯ ಬರುತ್ತದೆ ಎಂದರೆ ಬರಬಹುದು ಎಂದು ನುಡಿಯುತ್ತಾರೆ. ಕಿರಾಣಾ ಸ್ಟೋರನಿಂದ ಎಷ್ಟು ಆದಾಯ ಬರುತ್ತದೆ ಎಂದರೆ ಸಾಕ್ಷಿಯು ಪ್ರತಿದಿನ 50-100 ಉಳಿಯುತ್ತದೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಗೆ ಯಾವ ಯಾವ ಚಟಗಳು ಇದ್ದವು ಎಂದರೆ ಬಿಡಿ ಸೇದುವುದು, ಕುಡಿಯುವುದು, ಎಂದು ನುಡಿಯುತ್ತಾರೆ. ಮಹಾಬಲೇಶನಿಗೆ ತನ್ನ ಚಟಗೋಸ್ಕರ ಸಾಲ ಮಾಡಿದ್ದ ಎಂದರೆ ಸರಿ. ಸದರಿ ಸಾಲವನ್ನು 1ನೇ ಪ್ರತಿವಾದಿ ತಿರಿಸಬೇಕಾಗಿದೆ ಎಂದರೆ ಸರಿ. ಆತನ ಆಸ್ಪತ್ರೆಯ ಖರ್ಚು ವೆಚ್ಚ 1ನೇ ಪ್ರತಿವಾದಿ ತಿರಿಸಬೇಕಾಗಿದೆ ಎಂದರೆ ಸರಿ. ಬಸಲಿಂಗಮ್ಮಳಿಗೆ ವಯಸ್ಸಾದ ಕಾರಣ ಮತ್ತು ಅನೇಕ ರೋಗವಿರುವುದರಿಂದ ಆಕೆಯ ಸ್ವಂತ ಸಂರಕ್ಷಣೆ ಮತ್ತು ಉಪಜೀವನ ಮಾಡಿಕೊಳ್ಳಲಾಗುವುದಿಲ್ಲ ಎಂದರೆ ಸರಿ. 1ನೇ ಪ್ರತಿವಾದಿ, ಬಸಲಿಂಗಮ್ಮಳಿಗೆ ಹೊಡೆ ಬಡೆ ಮಾಡಿ ಹೊರಗೆ ಹಾಕಿದ್ದಾಳೆ ಎಂದರೆ ಸರಿಯಲ್ಲ. ವಾದಿಯು ಯಾವ ಜಮೀನು ಮಾರಾಟ ಮಾಡಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ವಾದಿಯವರು ಯಾವುದೇ ಹಣವಿಲ್ಲ ಮತ್ತು ಬ್ಯಾಂಕ

ಖಾತೆಯು ಇಲ್ಲ ಎಂದರೆ ಸರಿ. ದಾವೆಯಲ್ಲಿರುವ ವಿಷಯಗಳು ಗೊತ್ತಿಲ್ಲದೆ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ. ಈ ದಾವೆಯಲ್ಲಿನ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ..
ಲಿಂಗಸಗೂರು.